# ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕೃಷ್ಣರಾಜಪೇಟೆ.

**ಸಿ.ಸಿ. ನಂ. 27/2021**

ಫಿರ್ಯಾದುದಾರರು : ಆರಕ್ಷಕ ಉಪ ನಿರೀಕ್ಷಕರು,
ಕೆ.ಆರ್.ಪೇಟೆ ಗ್ರಾಮಾಂತರ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರು ಃ
1. ರಾಜೇಗೌಡ ಬಿನ್ ರಾಮೇಗೌಡ,
38 ವರ್ಷ ,
2. ಚೇತನ ಬಿನ್ ಶೇಖರೇಗೌಡ,
27 ವರ್ಷ ,

ಇಬ್ಬರ ವಾಸ ಃ ಕಾಶಿಮುರುಕನಹಳ್ಳಿ ಗ್ರಾಮ,
ಬೂಕನಕೆರೆ ಹೋಬಳಿ, ಕೆ.ಆರ್.ಪೇಟೆ ತಾಲ್ಲೂಕು.

**-:: ದೋಷಾರೋಪಣೆ ::-**

ಶ್ರೀ ಸುಧೀರ್, ಪ್ರ.ದ.ನ್ಯಾ.ದಂಡಾಧಿಕಾರಿಗಳು, ಕೃಷ್ಣರಾಜಪೇಟೆ ಆದ ನಾನು ಮೇಲೆ ಹೇಳಿದ ಆರೋಪಿತರಾದ ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸಿರುತ್ತೇನೆ.

ದಿನಾಂಕ 12.02.2020 ರಂದು ಸಂಜೆ 6.00 ಗಂಟೆ ಸಮಯದಲ್ಲಿ ಕೆ.ಆರ್.ಪೇಟೆ ಗ್ರಾಮಾಂತರ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಕಾಶಿಮುರುಕನಹಳ್ಳಿ ಗ್ರಾಮದ ಎಲ್ಲೆಗೆ ಸೇರಿದ ಸರ್ವೇ ನಂ. 25/6 ರ ಸಾಕ್ಷಿ 1 ರವರ ಜಮೀನಿಗೆ ಆರೋಪಿತರುಗಳು ಜೆ.ಸಿ.ಬಿಯನ್ನು ಕರೆದುಕೊಂಡು ಬಂದು ಮಟ್ಟ ಮಾಡಿಸಲು ಪ್ರಯತ್ನಿಸುತ್ತಿದ್ದಾಗ ಅದನ್ನು ನೋಡಿದ ಸಾಕ್ಷಿ 1 ರವರು ಅಲ್ಲಿಗೆ ಹೋಗಿ ಆರೋಪಿತರುಗಳಿಗೆ ಈ ಜಮೀನಿಗೆ ಸಂಬಂದಿಸಿದಂತೆ ಕೋರ್ಟ್ ನಲ್ಲಿ ಕೇಸು ನಡೆಯತ್ತಿರುತ್ತದೆ ನೀವು ಕೆಲಸ ಮಾಡಬೇಡಿ ಎಂದು ಹೇಳಿ ತಡೆಯಲು ಹೋದಾಗ 1 ಮತ್ತು 2 ನೇ ಆರೋಪಿತರುಗಳು ಸಾಕ್ಷಿ 1 ರವರನ್ನು ಉದ್ದೇಶಿಸಿ ಅವಾಚ್ಯ ಶಬ್ದಗಳಿಂದ ಬೈದು, , ಈ ಪ್ರಕಾರ ಭಾ.ದಂ.ಸಂ ಕಲಂ 504 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

2. ಎರಡನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, 1 ನೇ ಆರೋಪಿತರು ಸಾಕ್ಷಿ 1 ರವರನ್ನು ಎರಡು ಕೈಗಳಿಂದ ತಬ್ಬಿ ಮುಂದೆ ಹೋಗದಂತೆ ತಡೆದಿದ್ದು , ಈ ಪ್ರಕಾರ ಭಾ.ದಂ.ಸಂ ಕಲಂ 341 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

3. ಮೂರನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, 2 ನೇ ಆರೋಪಿತರು ಅಲ್ಲಿಯೇ ಬಿದ್ದಿದ್ದ ದೊಣ್ಣೆಯಿಂದ ಸಾಕ್ಷಿ 1 ರವರ ಬಲಬುಜದ ಮೇಲೆ ಹೊಡೆದು , ಈ ಪ್ರಕಾರ ಭಾ.ದಂ.ಸಂ ಕಲಂ 324 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

4. ನಾಲ್ಕನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು1 ಮತ್ತು 2 ನೇ ಆರೋಪಿತರುಗಳು ಸಾಕ್ಷಿ 1 ರವರ ತಲೆಯ ಜುಟ್ಟನ್ನು ಹಿಡಿದು ಎಳೆದಾಡಿ ರವಿಕೆಯನ್ನು ಹರಿದು ಹಾಕಿ ಅವಮಾನಗೊಳಿಸಿದ್ದು , ಈ ಪ್ರಕಾರ ಭಾ.ದಂ.ಸಂ ಕಲಂ 354 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

5. ಐದನೇಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು 1 ನೇ ಆರೋಪಿತರು ಸಾಕ್ಷಿ 1 ರವರನ್ನು ಕೆಟ್ಟದಾಗಿ ಬೈಯುತ್ತ ಕೆಳಕ್ಕೆ ಕೆಡವಿಕೊಂಡು ಚಪ್ಪಲಿ ಕಾಲಿನಿಂದ ಸಾಕ್ಷಿ 1 ರವರ ತಲೆಯ ಮೇಲೆ ಬೆನ್ನಿನ ಮೇಲೆ ಹೊಡೆದು , ಈ ಪ್ರಕಾರ ಭಾ.ದಂ.ಸಂ ಕಲಂ 355 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

6. ಆರನೆಯದಾಗಿ ಮೇಲ್ಕಾಣಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವುಗಳು ನಿಮ್ಮಗಳ ಏಕೋದ್ದೇಶವನ್ನು ಈಡೇರಿಸಿಕೊಳ್ಳಲು, ಆರೋಪಿತರಾದ ನೀವೆಲ್ಲರೂ ಸಾಕ್ಷಿ 2 ರವರನ್ನು ಉದ್ದೇಶಿಸಿ ಇಂದು ಬದುವಿಕೊಂಡಿದ್ದೀಯಾ ಇಂದಲ್ಲ ನಾಳೆ ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು, ಭಾ.ದಂ.ಸಂ ಕಲಂ 506 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು,

ಮೇಲ್ಕಾಣಿಸಿದ ಅಪರಾಧಗಳನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರ-1ಃ ಮೇಲೆ ಹೇಳಿದ ಅಂಶಗಳು ನಿಮಗೆ ಅರ್ಥವಾಗಿದೆಯೇ?

ಉಃ

ಪ್ರ-2ಃ ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉಃ

ಮೇಲ್ಕಂಡ ವಿಷಯವನ್ನು ಆರೋಪಿತರಿಗೆ ಓದಿ ಹೇಳಿ ಸರಿಯೆಂದು ಒಪ್ಪಿದ್ದು ಅದರಂತೆ ಹೇಳಿಕೆ ಮಾಡಿಕೊಂಡಿದ್ದೇನೆ.

ದಿ: 20.08.2024.
ಕೆ.ಆರ್.ಪೇಟೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಕೃಷ್ಣರಾಜಪೇಟೆ.